# ಸಾಮಾಜಿಕ ನ್ಯಾಯಕ್ಕಾಗಿ ಮಿಡಿದ ಕೊಲ್ಹಾಪುರದ ರಾಜರ್ಷಿ ಶಾಹು ಮಹಾರಾಜ

**ಬಾಪೂಜಿ ಕಾತರಕಿ**

ಕನ್ನಡ ಸಹಾಯಕ ಪ್ರಾಧ್ಯಾಪಕರು, ರುದ್ರಗೌಡ ಪಾಟೀಲ ಸರಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ, ಬಾಗಲಕೋಟೆ.

**DOI: https://doi.org/10.5281/zenodo.18785390**

## ABSTRACT:

ನಾಲ್ವಡಿ ಕೃಷ್ಣರಾಜ ಒಡೆಯರ ಸಮಕಾಲೀನರಾದ ಕೊಲ್ಹಾಪುರದ ರಾಜರ್ಷಿ ಶಾಹು ಮಹಾರಾಜರು ಭಾರತೀಯ ಸಾಮಾಜಿಕ ಇತಿಹಾಸದಲ್ಲಿ 'ಸಾಮಾಜಿಕ ನ್ಯಾಯ'ದ ಹರಿಕಾರರಾಗಿ ಗುರುತಿಸಿಕೊಂಡಿದ್ದಾರೆ. ವೈಯಕ್ತಿಕವಾಗಿ ಅನುಭವಿಸಿದ 'ವೇದೋಕ್ತ' ಪ್ರಕರಣದ ಅವಮಾನವನ್ನೇ ಸಾಮಾಜಿಕ ಕ್ರಾಂತಿಯನ್ನಾಗಿ ಪರಿವರ್ತಿಸಿದ ಇವರು, ಬ್ರಾಹ್ಮಣೇತರ ಮತ್ತು ದಲಿತ ವರ್ಗಗಳ ವಿಮೋಚನೆಗಾಗಿ ಶಿಕ್ಷಣವನ್ನು ಪ್ರಬಲ ಅಸ್ತ್ರವನ್ನಾಗಿ ಬಳಸಿದರು. ತಮ್ಮ ಸಂಸ್ಥಾನದಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣ, ವಿದ್ಯಾರ್ಥಿವೇತನ ಹಾಗೂ ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಜಾರಿಗೊಳಿಸುವ ಮೂಲಕ ಸಮಸಮಾಜದ ನಿರ್ಮಾಣಕ್ಕೆ ಬುನಾದಿ ಹಾಕಿದರು. ಅಸ್ಪೃಶ್ಯತೆ ನಿವಾರಣೆ, ಮಹಿಳಾ ಹಕ್ಕುಗಳ ರಕ್ಷಣೆ, ದೇವದಾಸಿ ಪದ್ಧತಿ ನಿಷೇಧ ಹಾಗೂ ಅಂತರ್ಜಾತಿ ವಿವಾಹಗಳಿಗೆ ಕಾನೂನಿನ ಮಾನ್ಯತೆ ನೀಡುವ ಮೂಲಕ, ಡಾ. ಬಿ.ಆರ್. ಅಂಬೇಡ್ಕರ್ ಅವರ ಸಂವಿಧಾನಾತ್ಮಕ ಮೀಸಲಾತಿ ಮತ್ತು ಸಾಮಾಜಿಕ ಸಮಾನತೆಯ ಆಶಯಗಳಿಗೆ ಇವರು ಮುನ್ನುಡಿ ಬರೆದರು.

## KEYWORDS:

ರಾಜರ್ಷಿ ಶಾಹು ಮಹಾರಾಜ, ಸಾಮಾಜಿಕ ನ್ಯಾಯ, ವೇದೋಕ್ತ ಪ್ರಕರಣ, ಮೀಸಲಾತಿ ಪದ್ಧತಿ, ಅಸ್ಪೃಶ್ಯತೆ ನಿವಾರಣೆ.

### ಪೀಠಿಕೆ

ನಾಲ್ವಡಿ ಕೃಷ್ಣರಾಜರ ಸಮಕಾಲೀನರಾದ ಛತ್ರಪತಿ ಶಾಹೂ ಅವರು ಕೊಲ್ಹಾಪುರ (ಕರವೀರ) ಸಂಸ್ಥಾನದ ಮಹಾರಾಜರಾಗಿ (1894-1922), ತಮ್ಮ ಸಂಸ್ಥಾನದಲ್ಲಿ ಸಾಮಾಜಿಕ ಬದಲಾವಣೆಯ, 'ಸಾಮಾಜಿಕ ನ್ಯಾಯ'ದ ಹರಿಕಾರರಾಗಿ ಹೆಸರಾದವರು. ಕೊಲ್ಹಾಪುರ ಸಂಸ್ಥಾನಕ್ಕೆ ದತ್ತುಪುತ್ರರಾಗಿ, ಶಿವಾಜಿ ಮಹಾರಾಜರ ವಂಶದ ವಾರಸುದಾರರಾಗಿ ಸುಮಾರು 28 ವರ್ಷಗಳ ಆಳ್ವಿಕೆ ಮಾಡಿದರು. ಮಹಾರಾಷ್ಟ್ರದಲ್ಲಿ ಪೇಶ್ವೆಗಳ ಆಡಳಿತದಿಂದ ಅಲ್ಲಿನ ಸಾಮಾಜಿಕ ವ್ಯವಸ್ಥೆ ಅಸಮಾನತೆಯ ಬೀಡಾಗಿತ್ತು. ಅಸ್ಪೃಶ್ಯತೆಯ ಕರಾಳತೆ ಎಲ್ಲೆಡೆ ತುಂಬಿತ್ತು. ಶೋಷಿತ ಮತ್ತು ಹಿಂದುಳಿದ ವರ್ಗದವರೆಲ್ಲ ಒಂದರ್ಥದಲ್ಲಿ ಗುಲಾಮಿ ಮನಸ್ಥಿತಿಯಲ್ಲಿದ್ದರು. ಇಂತಹ

ಸಂದರ್ಭದಲ್ಲಿ ಬ್ರಿಟಿಷ್ ಭಾರತದ ಅಧೀನ ಸಂಸ್ಥಾನವಾದ ಮಹಾರಾಜರಾಗಿ ಹಲವು ಮಿತಿಗಳ ನಡುವೆಯೂ ವ್ಯವಸ್ಥೆಯ ಹುನ್ನಾರಕ್ಕೆ ಬಲಿಯಾಗಿದ್ದ ಬಹುದೊಡ್ಡ ಸಮುದಾಯದ ನಾಯಕರಾಗಿ ಸಾಮಾಜಿಕ ಕ್ರಾಂತಿಯ ಜ್ಯೋತಿಯನ್ನು ಎತ್ತಿಹಿಡಿದು ಅದರ ಬೆಳಕು 'ಸಾಮಾಜಿಕ ನ್ಯಾಯದ' ರೂಪದಲ್ಲಿ ಎಲ್ಲರಿಗೂ ದೊರಕುವಂತೆ ಮಾಡಿದವರು ಶಾಹು ಮಹಾರಾಜರು.

ಮಹಾರಾಜರು ರೂಢಿಗತ ಸಮಾಜದ ಧಾರ್ಮಿಕ ಮತ್ತು ಆಚರಣೆಗಳನ್ನು ಚಾಚೂ ತಪ್ಪದೇ ಆಚರಿಸಿಕೊಂಡು ಬರುತ್ತಿದ್ದ ಮರಾಠ ಜಾತಿಯ ಹಿನ್ನೆಲೆಯವರು. ಇವರ 'ಕ್ರಾಂತಿಕಾರಕ ಚಾರಿತ್ರದ ನಿರ್ಮಾಣ'ದ ಹಿಂದೆ ಹಲವು ಪ್ರೇರಣೆ ಮತ್ತು ಪ್ರಭಾವಗಳು ಕಾರಣವಾಗಿವೆ. ಅವುಗಳಲ್ಲಿ ಮುಖ್ಯವಾಗಿ ಗುರುತಿಸಬಹುದಾದ ಅಂಶಗಳೆಂದರೆ ಗುರುದ್ವಯರ ಬೋಧನೆಗಳು, ವೇದೋಕ್ತ ಘಟನೆ, ಸಮಕಾಲೀನ ಪ್ರಗತಿಪರ ಚಿಂತಕರ ಮತ್ತು ಸಂಸ್ಥೆಗಳ ಪ್ರಭಾವ ಮತ್ತು ಸಾಮಾಜಿಕ ಸುಧಾರಣೆಗಾಗಿನ ಒತ್ತಡಗಳು ಕಾರಣವಾಗಿವೆ ಎನ್ನಬಹುದು. ಇವರ ಗುರುಗಳಾದ ಸರ್ ಸ್ಟುವರ್ಟ್ ಮಿಟ್‌ಫೋರ್ಡ್ ಫ್ರೇಜರ್ ಮತ್ತು ಸರ್ ರಘುನಾಥರಾವ್ ವ್ಯಂಕಾಜಿ ಸಬ್ನಿಸ್ ಅವರ ಬೋಧನೆಗಳು ಶಾಹು ಮಹಾರಾಜರ ವ್ಯಕ್ತಿತ್ವ ನಿರ್ಮಾಣದ ಮೇಲೆ ಪ್ರಭಾವ ಬೀರಿವೆ.

**ಶಾಹು ಮಹಾರಾಜರ ಬದುಕಿನ ದಿಕ್ಕನ್ನೇ ಬದಲಿಸಿದ ವೇದೋಕ್ತ ಘಟನೆ:**

ಕೊಲ್ಹಾಪುರ ಸಂಸ್ಥಾನದಲ್ಲಿ ಶಾಹು ಮಹಾರಾಜರ ಆಳ್ವಿಕೆ ಪ್ರಾರಂಭವಾದಂದಿನಿಂದ ಬೇರೆ ಬೇರೆ ಕ್ಷೇತ್ರಗಳಲ್ಲಿ ಹಿಂದುಳಿದ ವರ್ಗಗಳ ಮತ್ತು ಅಸ್ಪೃಶ್ಯರಿಗೆ ವಿಪುಲವಾದ ಅವಕಾಶಗಳನ್ನು ಮಾಡಿಕೊಡುವ ವ್ಯವಸ್ಥೆ ಮಾಡಲಾಯಿತು. ಇದು ಪೇಶ್ವೆಯವರ ಆಡಳಿತ ಕಾಲದಿಂದಲೂ ಎಲ್ಲ ರೀತಿಯ ಸೌಲಭ್ಯ ಹೊಂದಿದ್ದ ಬ್ರಾಹ್ಮಣರಿಗೆ ಹಿಡಿಸಲಿಲ್ಲ. ಸಂಸ್ಥಾನದ ದಿವಾನ ಹುದ್ದೆಯನ್ನು ಪಡೆದುಕೊಳ್ಳಲು ಬ್ರಾಹ್ಮಣ ಮತ್ತು ಕಾಯಸ್ಥರ ನಡುವೆ ನಿರಂತರವಾಗಿ ಸ್ಪರ್ಧೆ ನಡೆಯುತ್ತಿತ್ತು. ಇಂತಹ ಸಂದರ್ಭದಲ್ಲಿ ಮಹಾರಾಜರು ಕಾಯಸ್ಥ ಸಮುದಾಯದ ರಘುನಾಥರಾವ್ ಸಬ್ನಿಸ್ ಅವರನ್ನು ಆ ಹುದ್ದೆಗೆ ನೇಮಕ ಮಾಡಿದರು. ಇದರಿಂದ ಕುಪಿತಗೊಂಡ ಬ್ರಾಹ್ಮಣರು ಶಾಹು ಮಹಾರಾಜರ ನೀತಿಗಳನ್ನು ಟೀಕಿಸತೊಡಗಿದರು. ಸಬ್ನಿಸರನ್ನು ಮತ್ತು ಅವರ ಕುಟುಂಬವನ್ನು ನರಸೋಬಾವಾಡಿಯಂಥ ಕ್ಷೇತ್ರಗಳಿಗೆ ಬರದಂತೆ ಪುರೋಹಿತರೆಲ್ಲರೂ ಕೂಡಿ ನಿರ್ಬಂಧ ಹೇರಿದರು. ನಂತರ ಬ್ರಾಹ್ಮಣರ ಆಕ್ರಮಣ ಶಾಹು ಮಹಾರಾಜರ ಮೇಲೆ ನಿರಂತರವಾಗಿ ಮಾಡತೊಡಗಿದರು. ಶಾಹು ಅವರು ತಾರುಣ್ಯದ ದಿನಗಳಲ್ಲಿ ಧಾರ್ಮಿಕ ಕರ್ಮಕಾಂಡಗಳ ಕಠೋರ ಪರಿಪಾಲಕರಾಗಿದ್ದರು. ಪ್ರತಿದಿನ ಪ್ರಾತಃಕಾಲದಲ್ಲಿ ತಪ್ಪದೇ ದೇವರ ಪೂಜೆ ಮಾಡುವುದು, ಪವಿತ್ರ ಕ್ಷೇತ್ರಗಳ ದರ್ಶನ ಮಾಡುವುದು ರೂಢಿಯಾಗಿತ್ತು. ಇದು ಅವರು ಬೆಳೆದ ಅರಮನೆಯ ವಾತಾವರಣದ ಪ್ರಭಾವವಾಗಿತ್ತು.

ಶಾಹು ಮಹಾರಾಜರು 1899 ರ ನವೆಂಬರ್ ಕಾರ್ತಿಕ ಮಾಸದ ಒಂದು ದಿನ ಪದ್ಧತಿಯಂತೆ ಪಂಚಗಂಗಾ ನದಿಯಲ್ಲಿ ಪವಿತ್ರ ಸ್ನಾನ ಮಾಡಲು ತೆರಳಿದ್ದರು. ಅವರ

ಜತೆ ಅವರ ಸಹೋದರ ಬಾಪೂಸಾಹೇಬ್ ಘಾಟಗೆ, ಮಾಮಾಸಾಹೇಬ್ ಖಾನವೀಲಕರ ಮತ್ತು ಮುಂಬೈನ ಸಮಾಜ ಸುಧಾರಣಾವಾದಿ ಪಂಡಿತರಾಗಿದ್ದ ರಾಜಾರಾಮಶಾಸ್ತ್ರಿ ಭಾಗವತ ಜೊತೆಗೆ ಮಂತ್ರ ಪಠಿಸಲು ಹಾಗೂ ಆಶೀರ್ವದಿಸಲು ಪುರೋಹಿತರಾದ ನಾರಾಯಣ ಭಟ್ಟ ಇದ್ದರು. ಪದ್ಧತಿಯಂತೆ ಪುರೋಹಿತರು ಸ್ನಾನ ಮಾಡಿ ಧಾರ್ಮಿಕ ಕಾರ್ಯಗಳನ್ನು ನೆರವೇರಿಸುವುದು ರೂಢಿ. ಇಲ್ಲಿ ಶಾಹೂ ಮಹಾರಾಜರು ಧಾರ್ಮಿಕ ಪುಣ್ಯಸ್ನಾನ ಕಾರ್ಯ ಮಾಡುವ ಸಂದರ್ಭದಲ್ಲಿ ಈ ಪುರೋಹಿತ ಸ್ನಾನ ಮಾಡದೇ, ವೇದಮಂತ್ರಗಳ ಬದಲಾಗಿ ಪುರಾಣೋಕ್ತ ಮಂತ್ರಗಳನ್ನು ಹೇಳಲು ಪ್ರಾರಂಭಿಸಿದಾಗ ಇದನ್ನು ಸಂಸ್ಕೃತ ಪಂಡಿತರಾಗಿದ್ದ ರಾಜರ ಗೆಳೆಯ ರಾಜಾರಾಮಶಾಸ್ತ್ರಿಯವರು ಗಮನಿಸಿದರು ಮತ್ತು ರಾಜರ ಗಮನಕ್ಕೆ ತಂದರು.

ಪುರೋಹಿತ ನಾರಾಯಣ ಭಟ್‌ಗೆ ಹೀಗೇಕೆ ಎಂದು ಕೇಳಿದಾಗ ಅವನು, 'ಶೂದ್ರರಿಗೆ ಪುರಾಣದ ಮಂತ್ರಗಳನ್ನು ಮಾತ್ರ ಹೇಳುವುದು, ವೇದ-ಮಂತ್ರಗಳನ್ನು ಹೇಳುವಾಗ ಮಾತ್ರ ಪೂಜಾರಿ ಪವಿತ್ರ ಸ್ನಾನ ಮಾಡಬೇಕು. ಶೂದ್ರರಿಗೆ ಪುರಾಣ ಮಂತ್ರಗಳು ಸಾಕು ಆದ್ದರಿಂದ ಸ್ನಾನ ಮಾಡುವ ಅಗತ್ಯವಿಲ್ಲ' ಎಂದು ಕೆಟ್ಟ ಮಾತುಗಳನ್ನು ಆಡಿದ್ದರಿಂದ ಶಾಹು ಮಹಾರಾಜರಿಗೆ ಸಿಡಿಲು ಹೊಡೆದಂತಾಗಿದ್ದವು. (ಹಿಂದೆ ಶಿವಾಜಿ ಮಹಾರಾಜರು ಪಟ್ಟಾಭಿಷೇಕದ ಸಂದರ್ಭದಲ್ಲಿ ಶಿವಾಜಿ ಕ್ಷತ್ರಿಯನಲ್ಲ ಅವನು ಶೂದ್ರ ಹಾಗಾಗಿ ವೇದಮಂತ್ರ ಪಠಿಸುವುದಿಲ್ಲ ಎಂದು ನಿರಾಕರಣೆ ಮಾಡಿದ್ದು, ನಂತರ ಬಂಗಾಳದಿಂದ ಬ್ರಾಹ್ಮಣರನ್ನು ಕರೆಯಿಸಿ ವೇದೋಕ್ತವಾಗಿ ಪಟ್ಟಾಭಿಷೇಕ ಮಾಡಿಸಿಕೊಂಡ ವಿಷಯವಂತೂ ಇತಿಹಾಸದಲ್ಲಿ ನೆನಪಿಡುವಂತದ್ದು ).

ಹಿಂದಿನಿಂದಲೂ ಕ್ಷತ್ರಿಯ ರಾಜವಂಶದವರಾಗಿ ವೇದಮಂತ್ರಗಳ ಪಠಣ ಮಾಡಿಸಿಕೊಂಡು ಬರುವ ಹಕ್ಕು ಹೊಂದಿದ್ದ ರಾಜರಿಗೆ ಈ ಪೂಜಾರಿಯ ಹೀನ ಮಾತುಗಳು ಕಲ್ಪನೆ ಮತ್ತು ಸಹನೆ ಮೀರಿದ್ದಾಗಿದ್ದವು. ಶಾಹು ಅವರು ಕಟುಸತ್ಯವನ್ನು ಎದುರಿಸಿದರು, ಅಲ್ಲದೇ ಇದರಿಂದ ಪುರೋಹಿತರ ಹುಚ್ಚು ಕಲ್ಪನೆಗಳು ಎಷ್ಟು ಮಿತಿಮೀರಿವೆ ಎಂಬುದು ತಿಳಿದುಕೊಂಡರು. ಈ ಘಟನೆ ನಿಜವಾಗಿಯೂ ಆತ್ಮಾವಲೋಕನ ಮಾಡಿಕೊಳ್ಳುವಂತದ್ದು ಎಂದು ಅರಿತುಕೊಂಡು, ಅಂತರ್ಮುಖಿಯಾಗಿ ಯೋಚನೆ ಮಾಡಿ ಅಂದಿನಿಂದಲೇ ಅವರು ಬ್ರಾಹ್ಮಣರ ವಿರುದ್ಧ ಬಂಡಾಯದ ಬಾವುಟ ಹಿಡಿದು ಕೊನೆಯವರೆಗೂ ಹೋರಾಡಿದರು.

ಈ ವೇದೋಕ್ತ ವಿವಾದವು ಕೊಲ್ಹಾಪುರ ಸಂಸ್ಥಾನದಲ್ಲಿ ಹಲವಾರು ಸಂಘರ್ಷಗಳು ಸ್ಫೋಟಿಸಲು ಕಾರಣವಾಯಿತು. ಶಾಹು ಮಹಾರಾಜರ ಸಾಕು ತಾಯಿ ಆನಂದಿಬಾಯಿ ರಾಣಿ ಸಾಹೇಬ್ ಅವರ ಚಿತೆಗೆ ಅಗ್ನಿಸ್ಪರ್ಶ ಮಾಡುವಾಗ ವೇದೋಕ್ತ ಮಂತ್ರಗಳನ್ನು ಪಠಿಸಲು ಬ್ರಾಹ್ಮಣರು ನಿರಾಕರಿಸಿದರು. 'ಈ ಶೂದ್ರ ಮಹಿಳೆಗೆ ವೇದೋಕ್ತ ಮಂತ್ರಗಳನ್ನು ಹೇಳುವವರಾರು?' ಎಂದು ತಿರಸ್ಕಾರದ ನುಡಿಗಳನ್ನು ಆಡಿದರು. ದಿನನಿತ್ಯದ ಧಾರ್ಮಿಕ ಆಚರಣೆಗಳಲ್ಲಿ ವೇದೋಕ್ತ ಮಂತ್ರಗಳನ್ನು ಪಠಿಸಲು

ಪುರೋಹಿತ ನಾರಾಯಣ ಭಟ್ ನಿರಾಕರಿಸಿದನು. ರಾಜಪುರೋಹಿತನ ಸ್ಥಾನದಿಂದ ತೆಗೆದುಹಾಕಿ ಅವರಿಗೆ ಪೌರೋಹಿತ್ಯಕ್ಕಾಗಿ ಬರುತ್ತಿದ್ದ ವಾರ್ಷಿಕ 30000 ರೂ. ಆದಾಯದ ಎಲ್ಲ ಆಸ್ತಿಯನ್ನು ಮಹಾರಾಜರು ವಶಪಡಿಸಿಕೊಂಡರು. ಈ ತೀರ್ಮಾನದಿಂದ ಬ್ರಾಹ್ಮಣ ಸಮುದಾಯ ಶಾಹೂರವರ ಮೇಲೆ ವಿಷಪೂರಿತ ದಾಳಿಗಳನ್ನು ನಡೆಸಲು ಪ್ರಾರಂಭಿಸಿದರು. ಬಾಲಗಂಗಾಧರ ತಿಲಕರು ತಮ್ಮ ಕೇಸರಿ ಪತ್ರಿಕೆಯಲ್ಲಿ ಶಾಹೂ ಮಹಾರಾಜರ ಈ ಕಾರ್ಯವನ್ನು ಟೀಕಿಸಿ ಬರೆಯಲು ಪ್ರಾರಂಭಿಸಿದರು. ಕಾನೂನು ಹೋರಾಟಗಳನ್ನು ನಡೆಸಲು ಮುಂದಾಗಿ ಕೋರ್ಟಿನಲ್ಲಿ ದಾವೆ ಹೂಡಲಾಯಿತು. ಈ ವೇದೋಕ್ತ ಕಿಡಿಯು ಕೋಪೋದ್ರಿಕ್ತ ಸಾಮಾಜಿಕ ದಳ್ಳುರಿಯಾಗಿ ಸಾಮಾಜಿಕ ನ್ಯಾಯಕ್ಕಾಗಿ ಒಂದು ಆಂದೋಲನವಾಗಿ ರೂಪಾಂತರಗೊಂಡಿತು. ಮಹಾರಾಷ್ಟ್ರದಲ್ಲಿ ಇದು ಬ್ರಾಹ್ಮಣ-ಬ್ರಾಹ್ಮಣೇತರ ನಡುವಿನ ಸಂಘರ್ಷದ ಬೀಜವಾಗಿ ಪರಿಣಮಿಸಿತು.

ಶಾಹೂ ಮಹಾರಾಜರ ಮೇಲೆ ಪ್ರಭಾವ ಆ ಕಾಲಘಟ್ಟದಲ್ಲಿ ನಡೆಯುತ್ತಿದ್ದ ಸಮಾಜ ಸುಧಾರಣಾ ಕಾರ್ಯಗಳು ಮತ್ತು ಅದರಲ್ಲಿ ತೊಡಗಿಕೊಂಡಿದ್ದ ವ್ಯಕ್ತಿಗಳು ಎನ್ನಬಹುದು. ಮುಖ್ಯವಾಗಿ ಸತ್ಯಶೋಧಕ ಸಮಾಜದ ಜ್ಯೋತಿಬಾ ಫುಲೆ, ಮಹರ್ಷಿ ವಿಠಲ್ ರಾಮಜಿ ಶಿಂಧೆ, ಡಾ.ಬಾಬಾಸಾಹೇಬ್ ಅಂಬೇಡ್ಕರ್ ಮುಂತಾದವರ ಚಿಂತನೆಗಳು ಪ್ರಭಾವ ಬೀರಿದವು. ಇದರ ಜೊತೆಗೆ ಸುತ್ತಮುತ್ತಲಿನ ಸಂಸ್ಥಾನಗಳಲ್ಲಿ ಹಲವು ರಾಜರು ತರುತ್ತಿದ್ದ ಸಮಾಜ ಸುಧಾರಣಾ ಕಾಯ್ದೆಗಳು ಮತ್ತು ಮದ್ರಾಸ್, ಮೈಸೂರು ಮತ್ತು ಮುಂಬೈ ಪ್ರಾಂತ್ಯಗಳಲ್ಲಿ ನಡೆಯುತ್ತಿದ್ದ ಬ್ರಾಹ್ಮಣೇತರ ಚಳುವಳಿಗಳು ಮಹಾರಾಜರ ಮೇಲೆ ಪ್ರಭಾವ ಬೀರಿದವು.

ಶಾಹೂ ಮಹಾರಾಜರ ಮನಸ್ಸು ಸದಾ ತುಡಿಯುತ್ತಿದ್ದದ್ದು ಹಿಂದುಳಿದ-ಶೂದ್ರ ಮತ್ತು ಅಸ್ಪೃಶ್ಯ ಸಮುದಾಯದ ಕಲ್ಯಾಣಕ್ಕಾಗಿ. ಅವರ ಕೊನೆಯ ದಿನಗಳವರೆಗೂ ಅವಿರತವಾಗಿ ನಾನಾ ಕಾರ್ಯಗಳ ಮೂಲಕ ಶ್ರಮಿಸಿದರು. ಅವರು ಕೈಗೊಂಡ ಕ್ರಾಂತಿಕಾರಕ ಕಾರ್ಯಗಳ ಕುರಿತಾಗಿ ಸಂಕ್ಷಿಪ್ತವಾಗಿ ಅವಲೋಕಿಸೋಣ.

**1. ಶಿಕ್ಷಣ:**

**ಅ. ಶೂದ್ರರ/ಅಸ್ಪೃಶ್ಯರ ವಿಮೋಚನೆಯ ದಾರಿ**

ಸಮಾಜದಲ್ಲಿ ಶೂದ್ರರ ಮತ್ತು ಅಸ್ಪೃಶ್ಯರ ಕಲ್ಯಾಣವಾಗಬೇಕಾದರೆ ಅದಕ್ಕೆ ಬೇಕಾದ ಪ್ರಾಥಮಿಕ ಮತ್ತು ಮೂಲ ಪರಿಹಾರವೆಂದರೆ ಅವರಿಗೆ ಶಿಕ್ಷಣ ನೀಡಿದರೆ ಮಾತ್ರ ಸಾಧ್ಯವೆಂದು ಶಾಹು ಮಹಾರಾಜರು ನಂಬಿದ್ದರು. ಅರಮನೆಯ ಸಾಂಪ್ರದಾಯಿಕ ನಂಬಿಕೆಗಳಿಂದ ಮತ್ತು ಅವುಗಳ ಆಚರಣೆಯಿಂದಾಗಿ ಆರಂಭದಲ್ಲಿ ಮಹಾರಾಜರು ಮಡಿವಂತಿಕೆಯ ಮನಸ್ಥಿತಿಯವರಾಗಿದ್ದರು. ಯಾವಾಗ ಅವರು ಸ್ವತಃ ವೇದೋಕ್ತ ಸಂಘರ್ಷದಲ್ಲಿ ಜಾತಿಯ ಅವಮಾನದ ಬೆಂಕಿಯಲ್ಲಿ ಬೆಂದು ನೋವನ್ನು ಅನುಭವಿಸಿದರೋ ಆವಾಗಿನಿಂದ ಅವರ ಗಮನ ಶತಶತಮಾನಗಳಿಂದ

ಶೋಷಣೆಗೆ ಒಳಗಾದ ಶೂದ್ರ ಮತ್ತು ದಲಿತ ವರ್ಗದತ್ತ ಹರಿಯಿತು. ಬ್ರಾಹ್ಮಣೇತರ ಮತ್ತು ಅಸ್ಪೃಶ್ಯರಿಗೆ ಶಿಕ್ಷಣವನ್ನು ಪಡೆಯುವ ಅಧಿಕಾರವಿರಲಿಲ್ಲ. ಧರ್ಮದ ಹೆಸರಿನಲ್ಲಿ ಬ್ರಾಹ್ಮಣರು ಬ್ರಾಹ್ಮಣೇತರರಿಗೆ ಶಿಕ್ಷಣ ನೀಡುವುದನ್ನು ವಿರೋಧಿಸುತ್ತಲೇ ಬರುತ್ತಿದ್ದರು. ಕನಿಷ್ಠ ವರ್ಗದವರು ಶಿಕ್ಷಣವನ್ನು ಪಡೆದರೆ ಅದರ ಲಾಭ ಅವರಿಗೆ ದೊರೆಯುತ್ತದೆ, ಇದರಿಂದ ತಮ್ಮ ಹಕ್ಕುದಾರಿಕೆಗೆ ಧಕ್ಕೆ ಒದಗುತ್ತದೆ, ತಮ್ಮ ಪ್ರತಿಷ್ಠೆಗೆ ಕುಂದಾಗುತ್ತದೆ ಎಂದು ತಿಳಿದು ಧರ್ಮದ ಹೆಸರಿನಲ್ಲಿ ಕುತಂತ್ರ ನಡೆಸುತ್ತಿರುವುದನ್ನು ಶಾಹು ಮಹಾರಾಜರು ಅರಿತುಕೊಂಡರು.

"ನಮ್ಮ ಗತವು ಇತಿಹಾಸದಲ್ಲಿ ಒಂದು ದೀರ್ಘರಾತ್ರಿ, ಒಂದೇ ಒಂದು ಜಾತಿ ಶಿಕ್ಷಣದ ಏಕಸ್ವಾಮ್ಯತೆಯನ್ನು ಪಡೆದಿದೆ. ಮನು ಮತ್ತು ಶಾಸಕರು ಆ ಕಾಲದ ತುರ್ತುಗಳಿಗನುಗುಣವಾಗಿ ವಿವಿಧ ಜಾತಿಗಳ ಕಾರ್ಯನಿರ್ವಹಣೆಗಳ ಮೇಲೆ ನಿರ್ಬಂಧಗಳನ್ನು ಹೇರಿಕೆಗಳನ್ನು ಅನುಸರಿಸಿದರು ಮತ್ತು ಕೆಳಜಾತಿಗಳಿಗೆ ಶಿಕ್ಷಣದ ಬಾಗಿಲುಗಳನ್ನು ಮುಚ್ಚಲಾಯಿತು" ಎಂದು ತಮ್ಮ ಭಾಷಣವೊಂದರಲ್ಲಿ ಹೇಳಿರುವರು. ಈ ರೀತಿಯ ಬ್ರಾಹ್ಮಣರ ಕುತಂತ್ರಗಳ ಮತ್ತು ಜಾತಿ ತಾರತಮ್ಯತೆಯ ವಿರುದ್ಧ ತೊಡೆತಟ್ಟಿ ನಿಂತರು. ಈ ಮೂಲಕ ದಲಿತ ಮತ್ತು ಹಿಂದುಳಿದ ವರ್ಗಗಳ ಮಾನಸಿಕ ಗುಲಾಮಿತನದಿಂದ ವಿಮೋಚನೆಗೊಳಿಸಲು ಹಲವು ಕ್ರಮಗಳನ್ನು ಕೈಗೊಂಡರು.

ಸಂಸ್ಥಾನದಲ್ಲಿ ಎಲ್ಲಾ ಶೂದ್ರರ ಏಳಿಗೆಗಾಗಿ ಶಿಕ್ಷಣವನ್ನು ಒಂದು ಸಾಧನವಾಗಿ ಬಳಸುವ ಧೋರಣೆಯನ್ನು ಅನುಸರಿಸುವ ಮೂಲಕ ವಿವಿಧ ಹಿಂದುಳಿದ ಜಾತಿಗಳ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಲಾಯಿತು. ಅದರಲ್ಲಿಯೂ ಮುಖ್ಯವಾಗಿ ಅಸ್ಪೃಶ್ಯ ವಿದ್ಯಾರ್ಥಿಗಳಿಗಾಗಿ ಪ್ರತ್ಯೇಕ ಶಾಲೆ ಮತ್ತು ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಲಾಯಿತು. ಆ ದಿನಗಳಲ್ಲಿ ಸ್ಪೃಶ್ಯ ಮತ್ತು ಅಸ್ಪೃಶ್ಯರಿಗೆ ಪ್ರತ್ಯೇಕ ಶಾಲೆಗಳಿದ್ದವು, ಏಕೆಂದರೆ ಒಬ್ಬ ದಲಿತ ವ್ಯಕ್ತಿ ಮೇಲುಜಾತಿಯವರ ಓಣಿಯಲ್ಲಿ ನಡೆದುಕೊಂಡು ಹೋದರೆ ಮೈಲಿಗೆ ಎನ್ನುವ ಸಂದರ್ಭದಲ್ಲಿ, ಒಬ್ಬ ಮೇಲುಜಾತಿಯ ವಿದ್ಯಾರ್ಥಿ ತನ್ನ ಪಕ್ಕದಲ್ಲಿ ಕೆಳಜಾತಿಯ ವಿದ್ಯಾರ್ಥಿಯನ್ನು ಕುಳಿತುಕೊಳ್ಳಲು ಅವಕಾಶ ನೀಡುವುದು ಊಹಿಸಲು ಕೂಡ ಸಾಧ್ಯವಾಗಿರಲಿಲ್ಲ. ಇದನ್ನು ಕಾನೂನಿನ ಮೂಲಕ ನಿರ್ಮೂಲನೆ ಮಾಡಲು ಕಾಲವೂ ಪಕ್ವವಾಗಿರಲಿಲ್ಲ. ಹೀಗಾಗಿ ಶಾಹು ಮಹಾರಾಜರು ತಮ್ಮ ಸಹವರ್ತಿಗಳಾದ ಭಾಸ್ಕರ್‌ರಾವ್ ಜಾಧವ, ಮಹಾದೇವ ಡೋಂಗ್ರೆ, ಖಂಡೇರಾವ್ ಬಾಗಲ್ ಮತ್ತು ಶ್ರೀಪತ್‌ರಾವ್ ಶಿಂಧೆ ಅವರ ಮುಖಂಡತ್ವದಲ್ಲಿ ಅಸ್ಪೃಶ್ಯರಿಗೆ ಪ್ರತ್ಯೇಕ ಶಾಲೆ ಮತ್ತು ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುವ ಮೂಲಕ ದಲಿತರಲ್ಲಿ ಶಿಕ್ಷಣದ ಕುರಿತು ಜಾಗೃತಿಯನ್ನು ಮೂಡಿಸುವ ಕಾರ್ಯವನ್ನು ಕೈಗೊಳ್ಳಲಾಯಿತು. ಅಲ್ಲದೇ ಅವರನ್ನು ಶೈಕ್ಷಣಿಕವಾಗಿ ಮುಂದೆ ತರಲು 'ಅಸ್ಪೃಶ್ಯ ಜಾತಿಗಳ ಶಿಕ್ಷಣ ಪ್ರಸಾರ ಸಂಘ'ವನ್ನು ರಚಿಸಲಾಯಿತು. ಆಗಿನ ಸಾಮಾಜಿಕ ಸಂದರ್ಭದಲ್ಲಿ ಅಸ್ಪೃಶ್ಯರಲ್ಲಿ ಶಿಕ್ಷಣದ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಅವರಿಗಾಗಿ ಪ್ರತ್ಯೇಕ ಶಾಲೆಗಳನ್ನು, ವಿದ್ಯಾರ್ಥಿನಿಲಯಗಳ ಸಂಖ್ಯೆಯನ್ನು ಹೆಚ್ಚಿಸುವುದನ್ನು ಬಿಟ್ಟರೆ ಬೇರಾವ ಉಪಾಯ ಅವರಿಗೆ ಇರಲಿಲ್ಲ. ಶಾಹು

ಮಹಾರಾಜರು ಪಟ್ಟಕ್ಕೇರಿದ ಸಮಯದಲ್ಲಿ (1894) ಸಂಸ್ಥಾನದಲ್ಲಿ 168 ಸ್ಪೃಶ್ಯ ವಿದ್ಯಾರ್ಥಿಗಳಿಗಾಗಿ ಮತ್ತು 5 ಅಸ್ಪೃಶ್ಯ ವಿದ್ಯಾರ್ಥಿಗಳಿಗಾಗಿ ಶಾಲೆಗಳಿದ್ದವು. 1907–08 ರಲ್ಲಿ ಈ ಸಂಖ್ಯೆಯು ಕ್ರಮವಾಗಿ 416 ಮತ್ತು 16 ಕ್ಕೇರಿತು. ಶಾಹು ಮಹಾರಾಜರ ನಿರಂತರ ಪ್ರಯತ್ನದ ಫಲವಾಗಿ ನಿಧಾನವಾಗಿ ಶಾಲೆಗಳ ಸಂಖ್ಯೆ ಹೆಚ್ಚಾದವು.

**ಆ. ಶಿಕ್ಷಣದ ಗುಣಮಟ್ಟ ಸುಧಾರಣಾ ಕ್ರಮ:**

ಸ್ಪೃಶ್ಯ ಶಾಲೆಗಳ ಮತ್ತು ಅಸ್ಪೃಶ್ಯ ಶಾಲೆಗಳ ಪಠ್ಯಕ್ರಮ ಗುಣಮಟ್ಟ ಭಿನ್ನವಾಗಿತ್ತು. ನಾಲ್ಕನೆಯ ತರಗತಿ ಪಾಸು ಮಾಡಿದ ಅಸ್ಪೃಶ್ಯ ವಿದ್ಯಾರ್ಥಿ 5 ನೇ ತರಗತಿ–ಪ್ರೌಢಶಾಲೆ ಸೇರಲು ನಿಜವಾಗಿಯೂ ಸನ್ನದ್ಧನಾಗಿರುತ್ತಿರಲಿಲ್ಲ, ಆದಕಾರಣ ಅಸ್ಪೃಶ್ಯರ ಶಾಲೆಗಳ ಗುಣಮಟ್ಟ ಬಹಳ ಕಡಿಮೆಯಿತ್ತು. ಹೀಗಿರುವಾಗ ಅಸ್ಪೃಶ್ಯ ವಿದ್ಯಾರ್ಥಿಗಳಿಗೆ ಪ್ರೌಢಶಾಲೆಗೆ ಪ್ರವೇಶ ಸಿಗುತ್ತಿರಲಿಲ್ಲ. ಈ ಸಮಸ್ಯೆಯನ್ನು ಪರಿಹರಿಸಲು ಶಾಹು ಮಹಾರಾಜರು ನಾಲ್ಕನೆಯ ತರಗತಿ ಪಾಸಾದ ಅಸ್ಪೃಶ್ಯ ವಿದ್ಯಾರ್ಥಿಗಳ ಗುಣಮಟ್ಟ ಸುಧಾರಿಸಲು ವಿಶೇಷ ತರಗತಿಗಳನ್ನು ಪ್ರಾರಂಭಿಸುವ ಯೋಜನೆ ಜಾರಿಗೆ ತಂದರು. ಅಲ್ಲದೇ ಅಸ್ಪೃಶ್ಯ ವರ್ಗದವರ ಉನ್ನತ ಶಿಕ್ಷಣ ಹರಡುವ ಸಲುವಾಗಿ ಒಂದು ತಂಡವನ್ನು ಕಟ್ಟಿದರು. ಅವರಿಗೆ ಇಂಗ್ಲಿಷ್ ಭಾಷೆಯನ್ನು ಕಲಿಸಲು ತರಬೇತಿಯನ್ನು ನೀಡಿ ಅವರಿಂದ ನಾಲ್ಕನೆಯ ತರಗತಿಯ ಮಕ್ಕಳಿಗೆ ಇಂಗ್ಲಿಷ್ ಕಲಿಸಲು ನಿಯಮಿಸಲಾಯಿತು. ಈ ಮೂಲಕ ಅಸ್ಪೃಶ್ಯರ ಉನ್ನತ ಶಿಕ್ಷಣಕ್ಕೆ ಬುನಾದಿ ಹಾಕಲಾಯಿತು.

**ಇ. ಉಚಿತ ಮತ್ತು ಕಡ್ಡಾಯ ಶಿಕ್ಷಣ ಕಾಯ್ದೆ:**

ಸಂಸ್ಥಾನದಲ್ಲಿ ಅಸ್ಪೃಶ್ಯರ ಸಂಖ್ಯೆಗೆ ಅನುಗುಣವಾಗಿ ಅವರಲ್ಲಿ ಶಿಕ್ಷಣದ ಪ್ರಮಾಣ ಕಡಿಮೆ ಇರುವುದನ್ನು ಗಮನಿಸಿದ ಮಹಾರಾಜರು, "..ಶಿಕ್ಷಣವೊಂದೇ ನಮ್ಮ ರಕ್ಷಕ ಎಂಬುದೇ ನನ್ನ ದೃಢ ಅಭಿಪ್ರಾಯ. ಶಿಕ್ಷಣವಿಲ್ಲದೇ ಯಾವುದೇ ರಾಷ್ಟ್ರವು ಮಹಾಶೂರರನ್ನು ಮತ್ತು ರಾಯಭಾರಿಗಳನ್ನು ನೀಡಲಾರದು. ಆದ್ದರಿಂದ ಭಾರತಕ್ಕೆ ಕಡ್ಡಾಯ ಮತ್ತು ಉಚಿತ ಶಿಕ್ಷಣವು ಅತ್ಯಗತ್ಯ" ಎಂದು ಮನಗಂಡಿದ್ದರು. ಆದಕಾರಣ ದಿನಾಂಕ: 24–11–1911 ರಂದು ಅತಿ ಮುಖ್ಯವಾದ ಒಂದು ಆಜ್ಞೆಯನ್ನು ಹೊರಡಿಸಿ "ಸಂಸ್ಥಾನದಲ್ಲಿ ಎಲ್ಲಾ ಅಸ್ಪೃಶ್ಯ ಮಕ್ಕಳಿಗೆ ಸಂಪೂರ್ಣವಾಗಿ ಶಿಕ್ಷಣವು ಉಚಿತ ಮತ್ತು ಕಡ್ಡಾಯಗೊಳಿಸಲಾಯಿತು". ಇದರ ಜತೆಗೆ ಪ್ರತಿಭಾವಂತ ಅಸ್ಪೃಶ್ಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ನೀಡುವ ಆಜ್ಞೆಯನ್ನು ದಿನಾಂಕ: 07–03–1911 ರಂದು ಹೊರಡಿಸಲಾಯಿತು. ಅದರಲ್ಲಿ "..ಅಸ್ಪೃಶ್ಯ ಸಮುದಾಯದ ದುಸ್ತರವಾದ ಪರಿಸ್ಥಿತಿಯನ್ನು ಪರಿಗಣಿಸಿ ಮತ್ತು ಅವರ ಕಲಿಕೆಯನ್ನು ಪ್ರೋತ್ಸಾಹಿಸಲು ಪುಸ್ತಕಗಳು, ಸ್ಲೇಟುಗಳು ಮತ್ತು ಸೀಸದ ಕಡ್ಡಿಗಳನ್ನು ಉಚಿತವಾಗಿ ಹಂಚಲು 2500 ರೂ.ಗಳನ್ನು ನಿಗದಿಗೊಳಿಸಲಾಗಿದೆ" ಎಂದು ಹೇಳಲಾಗಿದೆ.

'ಸಂಪೂರ್ಣ ಸಾಕ್ಷರತೆ ಆಗದ ಹೊರತು ಜನತೆಯ ಸ್ಥಿತಿಗತಿಗಳು

ಸುಧಾರಿಸಲಾರವು' ಎಂಬ ಅಭಿಪ್ರಾಯ ಹೊಂದಿದ್ದ ಮಹಾರಾಜರು ಮುಂದೆ ಎಲ್ಲ ಸಮುದಾಯದ ಮಕ್ಕಳಿಗೆ 'ಕಡ್ಡಾಯ ಮತ್ತು ಉಚಿತ ಶಿಕ್ಷಣ'ವನ್ನು ನೀಡುವ ಆಜ್ಞೆಯನ್ನು 1917 ರ ಸೆಪ್ಟೆಂಬರ್ 29 ರಂದು ಹೊರಡಿಸಿದರು. ಅಲ್ಲದೇ ಈ ಗುರಿಯನ್ನು ಸಾಧಿಸಲು ಒಂದು ಪ್ರತ್ಯೇಕ ಇಲಾಖೆಯನ್ನು ತೆರೆದು ಅದಕ್ಕೆ ರಘುನಾಥ ನಾರಾಯಣ ಆಪ್ಟೆ ಅವರನ್ನು ನಿರ್ದೇಶಕರನ್ನಾಗಿ ನೇಮಕ ಮಾಡಿ ದಿನಾಂಕ: 28–02–1918 ರಂದು ಆದೇಶ ಹೊರಡಿಸಲಾಯಿತು.

**ಈ. ವಿಶೇಷ ವಿದ್ಯಾರ್ಥಿವೇತನ (ಸ್ಟೈಪೆಂಡರಿ) ಯೋಜನೆ:**

ಮಹಾರಾಜರು ಅಸ್ಪೃಶ್ಯ ಸಮುದಾಯದ ವಿದ್ಯಾರ್ಥಿಗಳಿಗೆ ಯಥೇಚ್ಛವಾದ ಆರ್ಥಿಕ ಸಹಾಯವನ್ನು ಒದಗಿಸುವುದರ ಜತೆಗೆ 1912 ರಲ್ಲಿ ಒಂದು ವಿಶೇಷ ವಿದ್ಯಾರ್ಥಿವೇತನ ಯೋಜನೆಯನ್ನು ಘೋಷಿಸಿದರು. 1912 ರಲ್ಲಿ ಬೇಟೆಯ ಸಂದರ್ಭದಲ್ಲಿ ಮಡಿದ ತಮ್ಮ ಕಿರಿಯ ಮಗ ರಾಜಕುಮಾರ ಶಿವಾಜಿಯ ನೆನಪಿನಲ್ಲಿ ಅಸ್ಪೃಶ್ಯರ ಮಕ್ಕಳ ಕಲಿಕೆಯನ್ನು ಪ್ರೋತ್ಸಾಹಿಸಲು 10,000 ರೂ.ಗಳ ಪ್ರಾಮಿಸರಿ ನೋಟುಗಳನ್ನು ಬಿಡುಗಡೆ ಮಾಡಿ ಅದರಿಂದ ಸಂಚಿತವಾಗುವ ಬಡ್ಡಿಯಲ್ಲಿ ಮಾಸಿಕ 5 ರೂ.ಗಳ 8 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ನೀಡಲು ಪ್ರಾರಂಭಿಸಿದರು. ಈ ಎಂಟರಲ್ಲಿ ವಿಶೇಷವಾಗಿ ಮೂವರು ಅಸ್ಪೃಶ್ಯ ವಿದ್ಯಾರ್ಥಿನಿಯರಿಗೆ ನೀಡುವಂತೆ ನಿಗದಿ ಮಾಡಲಾಗಿತ್ತು. ಅಂತಹ ಯೋಗ್ಯ ಹುಡುಗಿಯರು ಸಂಸ್ಥಾನದಲ್ಲಿ ಸಿಗದಿದ್ದರೆ ಸಂಸ್ಥಾನದ ಹೊರಗಿನ ಯೋಗ್ಯ ಹುಡುಗಿಯರಿಗೆ ನೀಡಬೇಕೆಂದು ಮಹಾರಾಜರು ಆದೇಶದಲ್ಲಿ ತಿಳಿಸಿದ್ದರು. ಅಸ್ಪೃಶ್ಯರ ಬಗೆಗಿದ್ದ ಅವರ ಕಾಳಜಿ ಯಾವುದೇ ಸೀಮೆಗೆ ಸೀಮಿತವಾಗಿರಲಿಲ್ಲ ಎಂಬುದು ಇದರಿಂದ ವೇದ್ಯವಾಗುತ್ತದೆ.

ಬರೋಡದ ಮಹಾರಾಜ ಸಯ್ಯಾಜಿರಾವ್ ಗಾಯಕವಾಡರಂತೆ ಶಾಹು ಮಹಾರಾಜರು ಕೂಡ ಉನ್ನತ ಅಧ್ಯಯನಕ್ಕೆ ವಿದೇಶಕ್ಕೆ ಹೋಗಬಯಸುವ ಬ್ರಾಹ್ಮಣೇತರ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ನೀಡುವ ಮೂಲಕ ಸಹಾಯ ಮಾಡಿದರು. ಡಾ.ಬಾಬಾಸಾಹೇಬ್ ಅಂಬೇಡ್ಕರ್ ಮತ್ತು ರಾವ್ ಬಹಾದ್ದೂರ್ ಪಿ.ಸಿ.ಪಾಟೀಲರು ಶಾಹು ಮಹಾರಾಜರಿಂದ ವಿದ್ಯಾರ್ಥಿವೇತನ ಪಡೆದು ವಿದೇಶಿ ವ್ಯಾಸಂಗ ಪೂರೈಸಿದ ಗಣ್ಯರು ಎಂಬುದು ವಿಶೇಷ.

**ಉ. ಸರ್ವರಿಗೂ ಸಮಾನ ಶಿಕ್ಷಣ ಆಜ್ಞೆ:**

ಶಾಹು ಮಹಾರಾಜರು 1918–19 ಅವಧಿಯಲ್ಲಿ ತಮ್ಮ ಸಂಸ್ಥಾನದಲ್ಲಿ ಅಸ್ಪೃಶ್ಯತೆಯನ್ನು ನಿರ್ಮೂಲನೆ ಮಾಡುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಆಜ್ಞೆಗಳನ್ನು ಹೊರಡಿಸಲು ಪ್ರಾರಂಭಿಸಿದರು. ಇದನ್ನು ಶಿಕ್ಷಣ ಕ್ಷೇತ್ರದಲ್ಲಿ ಜಾರಿಗೊಳಿಸುವುದು ಮೊದಲ ಆದ್ಯತೆಯಾಗಿತ್ತು. ಸಂಸ್ಥಾನದಲ್ಲಿ ಸ್ಪೃಶ್ಯ ಮತ್ತು ಅಸ್ಪೃಶ್ಯರಿಗಾಗಿ ಪ್ರತ್ಯೇಕ ಶಾಲೆಗಳಿದ್ದವು. ಈ ವ್ಯವಸ್ಥೆ ಒಂದು ರೀತಿಯಲ್ಲಿ ಅಸ್ಪೃಶ್ಯತೆಯ ಆಚರಣೆಗೆ ಅವಕಾಶ ಕೊಟ್ಟಂತಾಗುತ್ತದೆ ಎಂದು ಮನಗಂಡು ದಿನಾಂಕ: 28–11–

1919 ರಂದು ಆಜ್ಞೆಯೊಂದನ್ನು ಹೊರಡಿಸಿ "ಅಸ್ಪೃಶ್ಯರಿಗಿರುವ ಪ್ರತ್ಯೇಕ ಶಾಲೆಗಳನ್ನು ಬರುವ ದಸರಾ ಹಬ್ಬದಿಂದ ಅವುಗಳನ್ನು ಮುಚ್ಚಬೇಕು ಮತ್ತು ಸರ್ಕಾರಿ ಶಾಲೆಗಳಲ್ಲಿ ಸವರ್ಣ ಜಾತಿಯ ಹುಡುಗರೊಂದಿಗೆ ಅಸ್ಪೃಶ್ಯ ಹುಡುಗರನ್ನು ಸೇರಿಸಿಕೊಳ್ಳಬೇಕು. ಸರ್ಕಾರಿ ಶಾಲೆಗಳ ಸ್ಪರ್ಶ-ನಿಷಿದ್ಧ ಎಂಬ ಆಚರಣೆಯನ್ನು ಇನ್ನು ಮುಂದೆ ಆಚರಿಸುವಂತಿಲ್ಲ. ಎಲ್ಲಾ ಜಾತಿಯ ಮತ್ತು ಧರ್ಮದ ಮಕ್ಕಳು ಒಟ್ಟಿಗೆ ಕುಳಿತುಕೊಳ್ಳಬೇಕು" ಎಂದು ಆದೇಶ ಹೊರಡಿಸಿ ಎಲ್ಲ ಜಾತಿಯವರಿಗೂ ಸಮಾನ ಶಿಕ್ಷಣ ನೀಡುವ ಮತ್ತು ಆ ಮೂಲಕ ಜಾತಿಯ ಆಧಾರದ ಮೇಲೆ ನಡೆಸುತ್ತಿದ್ದ ಕರಾಳ ಪದ್ಧತಿಗಳಿಗೆ ಕಡಿವಾಣ ಹಾಕಿದರು.

**ಊ. ಅಸ್ಪೃಶ್ಯ ಮಕ್ಕಳಿಗೆ ಧಾರ್ಮಿಕ ಶಿಕ್ಷಣ ಯೋಜನೆ:**

ಶಾಹು ಮಹಾರಾಜರು ಅಸ್ಪೃಶ್ಯರನ್ನು ಮೇಲುಜಾತಿಗಳ ಸಮಕ್ಕೆ ತರಲು ಕೆಲವು ಕ್ರಾಂತಿಕಾರಕ ತೀರ್ಮಾನಗಳನ್ನು ತೆಗೆದುಕೊಂಡರು. ಅವರು ಅಸ್ಪೃಶ್ಯ ಮಕ್ಕಳಿಗೆ ಸೂಕ್ತವಾದ ಧಾರ್ಮಿಕ ಶಿಕ್ಷಣವನ್ನು ನೀಡುವುದಕ್ಕೆ ಯೋಜನಾಬದ್ಧವಾಗಿ ಚಿಂತಿಸಿದ್ದರು. ಈ ಉದ್ದೇಶ ಸಾಧನೆಗಾಗಿ ಆರ್ಯ ಸಮಾಜದ ಬೋಧಕರನ್ನು ಬಳಸಿಕೊಂಡಿದ್ದರು. ಅವರ ಆಚರಣೆಯ ಪ್ರಕಾರ ಈ ಅಸ್ಪೃಶ್ಯ ಮಕ್ಕಳನ್ನು ಆರ್ಯಸಮಾಜ ತನ್ನ ಸುಪರ್ದಿಗೆ ತೆಗೆದುಕೊಂಡು ಉಪನಯನ ವಿಧಿಯನ್ನು ಆಚರಿಸಿದರು ಮತ್ತು ಮೊದಲ ಬಾರಿಗೆ ಅವರಿಗೆ ವೇದಗಳನ್ನು ಬೋಧಿಸಿದರು. ಈ ಕ್ರಮದಿಂದಾಗಿ ಮಕ್ಕಳಲ್ಲಿ ಬೇರೂರಿದ್ದ ಕೀಳರಿಮೆಯ ಭಾವನೆಯನ್ನು ಕಿತ್ತುಹಾಕಲು ಸಹಕಾರಿಯಾಯಿತು. ಅವರಲ್ಲಿ ಹೊಸ ಆತ್ಮವಿಶ್ವಾಸ ಮೂಡಿತು, ಅಲ್ಲದೇ ಅವರು ಇತರ ಮಕ್ಕಳೊಂದಿಗೆ ಸಮಾನತೆಯ ಮನಸ್ಥಿತಿಯಿಂದ ವರ್ತಿಸತೊಡಗಿದರು. ಇದು ಶಾಹು ಮಹಾರಾಜರು ಕೈಗೊಂಡ ನವೀನ ಪ್ರಯೋಗವೆನ್ನಬಹುದು.

**2. ಬ್ರಾಹ್ಮಣೇತರ ವರ್ಗಗಳ ಜಾಗೃತಿ ಮತ್ತು ಕಲ್ಯಾಣ ಕಾರ್ಯಗಳು:**

ದಕ್ಷಿಣ ಭಾರತದಲ್ಲಿ ಹಿಂದುಳಿದ ವರ್ಗಗಳ ಅಥವಾ ಬ್ರಾಹ್ಮಣೇತರರ ಚಳುವಳಿಗೆ ಶಾಹೂ ಮಹಾರಾಜರ ಕೊಡುಗೆ ಅಪಾರವಾಗಿದೆ. ಯಾವಾಗ ವೇದೋಕ್ತ ಸಂಘರ್ಷದ ಅಂತಿಮ ಗೆಲುವು ಗಳಿಸಿದ ನಂತರ ತಮ್ಮ ಅಭೂತಪೂರ್ವವಾದ ಶಕ್ತಿ-ಕ್ರೋಡೀಕರಿಸಿಕೊಂಡು ಮರಾಠ ಮತ್ತು ಬ್ರಾಹ್ಮಣೇತರ ಹಕ್ಕುಗಳಿಗಾಗಿ ಅವಿರತವಾಗಿ ಶ್ರಮಿಸಿದರು. ಬಾಂಬೆ ಪ್ರೆಸಿಡೆನ್ಸಿಯಲ್ಲಿ ಬ್ರಾಹ್ಮಣೇತರರ ಆಂದೋಲನ ಉಗಮವಾಗುವ ಸಂದರ್ಭದಲ್ಲೇ ಮದ್ರಾಸ್ ಪ್ರಸಿಡೆನ್ಸಿ ಮತ್ತು ಮೈಸೂರು ಪ್ರಾಂತ್ಯಗಳಲ್ಲಿ ಸಮಾನವಾಗಿ 1915-16 ರ ಸಂದರ್ಭದಲ್ಲಿ ಪ್ರಾರಂಭವಾದವು. ಈ ಆಂದೋಲನಗಳ ವೇಗಕ್ಕೆ ತೈಲವಾಗಿ ನಿಂತವರು ಶಾಹೂ ಮಹಾರಾಜರು. ಅವರು ದಕ್ಷಿಣ ಭಾರತದ ಬ್ರಾಹ್ಮಣೇತರರ ಚಳುವಳಿಯಾದ 'ಜಸ್ಟಿಸ್ ಚಳುವಳಿ'ಯ ಜೊತೆಗೆ ಸಂವಹನ ನಡೆಸಿ ಹಿಂದುಳಿದವರ ಕಲ್ಯಾಣಕ್ಕಾಗಿ ವಿಚಾರ ವಿನಿಮಯ ಮಾಡಿರುವುದು ಪ್ರಮುಖವಾದುದು.

1919 ರಿಂದ 1921 ರ ನಡುವಿನ ವರ್ಷಗಳಲ್ಲಿ ಮದ್ರಾಸಿನ ಬ್ರಾಹ್ಮಣೇತರರ ನಾಯಕರಾದ ಡಾ.ಮಾಧವ ನಾಯರ್, ಸರ್ ಪಿ. ತ್ಯಾಗರಾಜ ಚೆಟ್ಟಿಯಾರ್, ಸಿ. ನಟೇಶ್ ಮೊದಲಿಯಾರ್ ಮತ್ತು ಶಂಕರನ್ ನಾಯರ್ ಅವರೊಂದಿಗೆ ಆಪ್ತ ಸಂಬಂಧಗಳನ್ನು ಹೊಂದಿದ್ದರು. ಮಹಾರಾಷ್ಟ್ರದಲ್ಲಿ ಶಾಹೂ ಮಹಾರಾಜರು ಹೇಗೋ ಹಾಗೆ ಮದ್ರಾಸಿನಲ್ಲಿ ಡಾ.ನಾಯರ್ ಅವರು ಮುನ್ನಡೆಸಿದರು. ಅವರು ಭಾರತ ಮತ್ತು ಇಂಗ್ಲೆಂಡುಗಳಲ್ಲಿ ಬ್ರಾಹ್ಮಣೇತರ ಮತ್ತು ದಮನಿತರ ಹಕ್ಕುಗಳಿಗೆ ಹೋರಾಡಿದವರು. ಬ್ರಾಹ್ಮಣೇತರರ ಪರವಾಗಿ ಇಂಗ್ಲೆಂಡಿಗೆ ತೆರಳಿ ಬ್ರಾಹ್ಮಣೇತರರ ಹಕ್ಕುಗಳಿಗಾಗಿ ಪ್ರಚುರಪಡಿಸಿದವರು. ಈ ಇಬ್ಬರನ್ನು ಧನಂಜಯ್ ಕೀರ್ ಅವರು "ಭಾರತದ ಸಾಮಾಜಿಕ ಜನತಂತ್ರ ಮತ್ತು ಸಮಾನತೆಯ ಸಮಾಜದ ಏಕಾಂಗಿ ಪೂರ್ವಗಾಮಿಗಳು" ಎಂದು ಗೌರವಿಸಿದ್ದಾರೆ.

ಬಹುಮಟ್ಟಿಗೆ ಈ ಮುಂದಿನ ಐದು ತತ್ತ್ವಗಳ ಆಧಾರದಲ್ಲಿ ಸ್ಥಾಪಿಸಿದ ಸಾಮಾಜಿಕ ಸಂಸ್ಥೆಗಳ ಮತ್ತು ಹಿಂದುಳಿದ ವರ್ಗಗಳ ಆಂದೋಲನವನ್ನು ಶಾಹು ಮಹಾರಾಜರು ಜಾರಿಗೊಳಿಸಲು ಪ್ರಯತ್ನಿಸಿದರು.

1. ಧರ್ಮಕ್ಕೆ ಸಾಮಾಜಿಕ ನೈತಿಕತೆಯ ಅಸ್ತಿವಾರವನ್ನು ಹಾಕುವುದಕ್ಕೆ ವಿಸ್ತೃತ ಧಾರ್ಮಿಕ ಸುಧಾರಣೆಯನ್ನು ತರುವುದು ಮತ್ತು ಪುರೋಹಿತಶಾಹಿಯ ಪ್ರಾಬಲ್ಯವನ್ನು ಕೊನೆಗೊಳಿಸುವುದು.
2. ಶಿಕ್ಷಣ ಪ್ರಸಾರಗೊಳಿಸುವುದು ಮತ್ತು ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒತ್ತಾಯಿಸುವುದು.
3. ಹಿಂದುಳಿದ ವರ್ಗಗಳ ಜಾತಿವಾರು ಸಂಸ್ಥೆಗಳನ್ನು ಬೆಳೆಸುವುದು; ಆ ಮೂಲಕ ಅವರಲ್ಲಿ ಜನತಾಂತ್ರಿಕ ಆಶೋತ್ತರಗಳನ್ನು ಜಾಗೃತಗೊಳಿಸಲು ಮತ್ತು ಅವರ ಆತ್ಮಗೌರವವನ್ನು ಹೆಚ್ಚಿಸುವುದು.
4. ಸ್ವತಂತ್ರ ಮೀಸಲು ಮತದಾರರ ಸಮುದಾಯ (ಕ್ಷೇತ್ರ) ಮತ್ತು ಮೀಸಲು ಸ್ಥಾನಗಳನ್ನು ಸ್ಥಾಪಿಸುವ ಮೂಲಕ ಮೇಲುಜಾತಿ ವರ್ಗಗಳ ಸಾಮಾಜಿಕ ಮತ್ತು ರಾಜಕೀಯ ಪ್ರಾಬಲ್ಯವನ್ನು ಕಡಿಮೆ ಮಾಡುವುದು.
5. ಸಾಮಾಜಿಕ ಏಳಿಗೆ ಮತ್ತು ಕೃಷಿಯ ಸುಧಾರಣೆಗಾಗಿ ಹಿಂದುಳಿದ ವರ್ಗಗಳ ಮತ್ತು ಬ್ರಾಹ್ಮಣೇತರರ ಪಕ್ಷಗಳ ಸ್ಥಾಪನೆಯನ್ನು ಬ್ರಿಟಿಷ್ ಸರ್ಕಾರದ ನೆರವಿನಿಂದ ಬೆಳೆಸುವುದು.

ಶಾಹು ಮಹಾರಾಜರು ವೇದೋಕ್ತ ಪ್ರಕರಣದ ನಂತರ ಧಾರ್ಮಿಕ ಸುಧಾರಣೆಗಳನ್ನು ತೀವ್ರಗೊಳಿಸಿದರು. ಸ್ವಾಮಿ ದಯಾನಂದ ಸರಸ್ವತಿ, ಕೇಶವಚಂದ್ರ ಮತ್ತು ಜ್ಯೋತಿಬಾ ಫುಲೆ ಅವರು ಮಾಡಿದ ಮಹಾ ಕೆಲಸಗಳನ್ನು ಹೊಗಳಿದರು ಮತ್ತು ಸಂಘಟನೆಗಳಾದ ಬ್ರಹ್ಮೋಸಮಾಜ, ಆರ್ಯಸಮಾಜ ಮತ್ತು ಸತ್ಯಶೋಧಕ ಸಮಾಜಗಳು ಧಾರ್ಮಿಕ ಗುಲಾಮಿತ್ವದಿಂದ ಸಮಾಜವನ್ನು ವಿಮೋಚನೆ ಮಾಡಬೇಕೆಂದು ಒತ್ತಾಯಪಡಿಸಿದರು.

## 3. ಅಸ್ಪೃಶ್ಯತೆ ರದ್ಧತಿ: ಕ್ರಾಂತಿಕಾರಕ ಕ್ರಮಗಳು

ಕೊಲ್ಹಾಪುರ ಸಂಸ್ಥಾನದಲ್ಲಿ ಹರಡಿದ್ದ ಸಾಮಾಜಿಕ ಅನಿಷ್ಟ ಪಿಡುಗಾದ ಅಸ್ಪೃಶ್ಯತೆಯ ನಿವಾರಣೆಗಾಗಿ ಹಲವು ಕ್ರಾಂತಿಕಾರಕ ಕಾನೂನು, ತಂತ್ರಗಳು ಮತ್ತು ನಿಬಂಧನೆಗಳ ಮೂಲಕ ತೊಡೆದುಹಾಕಲು ಪ್ರಯತ್ನಗಳು ನಡೆದವು. ಸಾಂಪ್ರದಾಯಿಕ ಸಮಾಜದಲ್ಲಿ ಶತಶತಮಾನಗಳಿಂದ ಘನೀಭೂತವಾಗಿದ್ದ ಅಸ್ಪೃಶ್ಯತೆಯ ನಿವಾರಣೆಯ ಕುರಿತು ಮಾತನಾಡಲು ಅಸಡ್ಡೆ ತೋರಿಸುವ ಆ ಕಾಲಘಟ್ಟದಲ್ಲಿ ಶಾಹು ಮಹಾರಾಜರು ಟೊಂಕಕಟ್ಟಿ ನಿಂತು ಹೋರಾಡಿದರು. ಸಮಸಮಾಜದ ಕನಸನ್ನಿಟ್ಟುಕೊಂಡು ಕೇವಲ ತಮ್ಮ ಸಂಸ್ಥಾನ ಅಷ್ಟೆ ಅಲ್ಲದೇ ಭಾರತದಾದ್ಯಂತ ಈ ಅನಿಷ್ಟತೆಯನ್ನು ಹೋಗಲಾಡಿಸಲು ಸತತ ಪ್ರಯತ್ನಿಸಿದರು. ಇದಕ್ಕಾಗಿ ತಮ್ಮ ಸಂಸ್ಥಾನದಲ್ಲಿ ಜಾರಿಗೊಳಿಸಿದ ಕ್ರಮಗಳನ್ನು ನೋಡೋಣ.

ದಕ್ಷಿಣ ಭಾರತದಲ್ಲಿ ಮೈಸೂರು, ಬರೋಡ, ತಿರುವಾಂಕೂರು ಸಂಸ್ಥಾನಗಳಲ್ಲಿ ಅಸ್ಪೃಶ್ಯತೆಯ ನಿವಾರಣೆಯ ಕುರಿತು ಸಾಕಷ್ಟು ಚರ್ಚೆ ನಡೆದು ಹಲವು ಕಾನೂನುಗಳನ್ನು ತರಲಾಗುತ್ತಿತ್ತು. ಇದಕ್ಕೆ ಕಾರಣ ಪಾಶ್ಚಿಮಾತ್ಯ ಶಿಕ್ಷಣ ಮತ್ತು ಇತರ ಮೌಲ್ಯಗಳ ಪ್ರಭಾವ ಜತೆಗೆ ಹಲವು ಪ್ರಗತಿಪರ ಚಿಂತಕರ ಪ್ರಭಾವವಾಗಿತ್ತು. ಕೊಲ್ಹಾಪುರ ಸಂಸ್ಥಾನದಲ್ಲಿ ಶಾಹು ಮಹಾರಾಜರಿಗೆ ಈ ವಿಷಯದಲ್ಲಿ ಬೆನ್ನೆಲುಬಾಗಿ ನಿಂತವರು ವಿಠಲ್ ರಾಮಜಿ ಶಿಂಧೆ, ಡಾ.ಬಾಬಾಸಾಹೇಬ್ ಅಂಬೇಡ್ಕರ್, ಭಾಸ್ಕರ್‌ರಾವ್ ಜಾಧವ, ಮಹಾದೇವ ಡೋಂಗ್ರೆ, ಶ್ರೀಪತ್‌ರಾವ್ ಶಿಂಧೆ ಮತ್ತು ಆರ್ಯ ಸಮಾಜದ ಚಿಂತಕರು. ಜಾತಿಯ ಕ್ರೂರತೆಯು ಸ್ವತಃ ಅನುಭವಿಸಿದ್ದ ಮಹಾರಾಜರು 1918 ರಿಂದ ಹಲವಾರು ಕ್ರಮಗಳನ್ನು ಜಾರಿಗೊಳಿಸಿದರು.

- ಮಹಾರಾಜರು ಅಸ್ಪೃಶ್ಯರಿಂದ ಬಹಿರಂಗವಾಗಿ ಆಹಾರ ಸ್ವೀಕರಿಸುವ ಕ್ರಮ: ಸಮಾಜಕ್ಕೆ ಹೊಸ ಸಂದೇಶ.
- ಗಂಗಾರಾಮ್ ಕಾಂಬ್ಳೆಯವರ 'ಸತ್ಯ ಸುಧಾರಕ ಹೋಟೆಲ್' ನಲ್ಲಿ ಚಹಾ ಕುಡಿಯುವ ಕಾರ್ಯ.
- ತಮ್ಮ ಜತೆಯಲ್ಲಿ ರಾಣಿಸಾಹೇಬ್, ರಾಜಕುಮಾರಿ ಅಕ್ಕಾಸಾಹೇಬ್ ಮತ್ತು ಇಂದುಮತಿದೇವಿಯವರನ್ನು ಕರೆದುಕೊಂಡು ಮಹರ ಸಮುದಾಯದವರೊಂದಿಗೆ ಚಹಾದ ಜತೆಗೆ ಹೆಣ್ಣುಮಕ್ಕಳು ಪರಸ್ಪರ 'ಹಳದಿ-ಕುಂಕುಮ' ಕಾರ್ಯದಲ್ಲಿ ತೊಡಗುವಂತೆ ಪ್ರೋತ್ಸಾಹ.

**ಜಾತಿ ವಿನಾಶದ ಕುರಿತಾದ ಶಾಹು ಮಹಾರಾಜರ ಚಿಂತನೆಗಳು:**

ಶಾಹು ಮಹಾರಾಜರು ಜಾತಿವ್ಯವಸ್ಥೆಯ ಕುರಿತಾಗಿ ಜೀವಶಾಸ್ತ್ರೀಯ ನೆಲೆಯಿಂದ ಚಿಂತಿಸಿದರು. ಮನುಷ್ಯನು ಕೂಡ ಪ್ರಕೃತಿಯಲ್ಲಿ ಉಳಿದ ಜೀವಿಗಳಂತೆ ಒಬ್ಬ ಜೀವಿ. ಅವನು ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ಪ್ರಕೃತಿಯಲ್ಲಿದ್ದಾನೆ. ವಿಶಿಷ್ಟ ಜೀವಿ ತನ್ನದೇ ಆದ ವಿಶಿಷ್ಟ ಜೀವಿಗೆ ಜನ್ಮ ನೀಡುತ್ತದೆ ಎಂದು ಹೇಳುತ್ತಾರೆ. ಅಲ್ಲದೇ 'ಸತ್ವದಲ್ಲಿ, ಸಂರಚನೆಯಲ್ಲಿ ಮತ್ತು ಉಗಮದಲ್ಲಿ ಯಾರು ಸಾದೃಶ್ಯ ಪಡೆಯುವರೋ

ಅವರೆಲ್ಲ ಅದೇ ಜೀವಜಾತಿಗೆ ಸೇರಿರುವವರೆಂದು ಅರ್ಥಮಾಡಿಕೊಳ್ಳಬೇಕು. ಮತ್ತೆ ಸಂರಚನೆಯಲ್ಲಿ ಹೋಲುವವರೇ ಜೀವಜಾತಿಯಲ್ಲಿ ಹೋಲುತ್ತಾರೆ' ಎಂಬ ತರ್ಕಬದ್ಧ ನಿರ್ವಚನವನ್ನು ನೀಡುತ್ತಾರೆ. ಈ ಜೀವಜಾತಿಯ ನಿರ್ವಚನವು ಹಿಂದೂ ಧರ್ಮದ ಜಾತಿಪದ್ಧತಿಯ ಬುಡಕ್ಕೆ ಕೊಡಲಿಪೆಟ್ಟಿನಂತೆ ಇತ್ತು.

ಶಾಹು ಮಹಾರಾಜರು ಜಾತಿ ವಿನಾಶದ ವಿಚಾರ ಮಾಡುವಾಗ ಮೇಲಿಂದ ಮೇಲೆ ಜಪಾನಿನ ಸಮುರಾಯ ಜನರ ಉದಾಹರಣೆ ನೀಡುತ್ತಾರೆ. ಈ ಸಮುರಾಯಿಗಳು ತಮ್ಮನ್ನು ತಾವೇ ಶ್ರೇಷ್ಠರೆಂದು ಬಗೆದು ಇತರರು ಕೀಳು ಎಂದು ಬಗೆದರು. ಆದರೆ ಜಪಾನ್ ದೇಶವನ್ನು ಬಲಿಷ್ಠ ಮತ್ತು ಆಧುನಿಕ ರಾಷ್ಟ್ರವನ್ನಾಗಿ ಮಾಡಲು ನಿರ್ಧರಿಸಿ ಸ್ವಯಂಪ್ರೇರಣೆಯಿಂದ ತಮ್ಮ ಶ್ರೇಷ್ಠ ಸ್ಥಾನಮಾನವನ್ನು ಮತ್ತು ಹಕ್ಕುಗಳನ್ನು ತ್ಯಜಿಸಿಬಿಟ್ಟರು ಮತ್ತು ರಾಷ್ಟ್ರದ ಮುಖ್ಯವಾಹಿನಿಯಲ್ಲಿ ಬೆರೆತುಬಿಟ್ಟರು. ‘‘ಜಪಾನಿನಲ್ಲಿ ಸಮುರಾಯಿಗಳು ಮಾಡಿದಂತೆ ಭಾರತದಲ್ಲಿ ಈ ಬ್ರಾಹ್ಮಣರು ಮತ್ತು ಕ್ಷತ್ರಿಯರು ಏಕೆ ಮಾಡಬಾರದು?'' ಎಂದು ಶಾಹು ಮಹಾರಾಜರು ಕೇಳುತ್ತಾರೆ. ‘‘ಜಾತಿಬೇಧಗಳನ್ನು ಅಳಿಸಿಹಾಕುವುದು ರಾಷ್ಟ್ರೀಯ ಹೊಣೆ ಮತ್ತು ಅದನ್ನು ಬ್ರಾಹ್ಮಣ ಮತ್ತು ಕ್ಷತ್ರಿಯರಿಂದ ಪ್ರಾರಂಭವಾಗಬೇಕು. ಪ್ರಾಚೀನಕಾಲದಿಂದಲೂ ಅನುಭವಿಸುತ್ತಿರುವ ಶ್ರೇಷ್ಠತೆಯ ಹಕ್ಕುಗಳನ್ನು ಅವರು ಬಿಟ್ಟುಕೊಡಬೇಕು ಮತ್ತು ಅವರು ಬೇರೆಯವರಿಗೆ ಆದರ್ಶವಾಗಬೇಕು. ಒಂದು ವೇಳೆ ಜಾತಿ-ಬೇಧಗಳನ್ನು ಅಳಿಸಿಹಾಕಲು ಕೆಳಜಾತಿಗಳಿಂದ ಪ್ರಾರಂಭವಾದರೆ ಅದು ದುರಂತವಾಗುತ್ತದೆ. ಆದರೆ ಇದು ಮೇಲುಜಾತಿಗಳಿಂದ ಪ್ರಾರಂಭವಾದರೆ ಅದು ಬೇರೆ ಜಾತಿಯವರಿಗೆ ಸ್ವಾರ್ಥತ್ಯಾಗದ ವಿಚಾರ ಪ್ರಚೋದಕ ನಿದರ್ಶನವಾಗುತ್ತದೆ'' ಎಂದಿರುವ ಅವರ ಮಾತುಗಳನ್ನು ಗಮನಿಸಿದರೆ ಜಾತಿಬೇಧವನ್ನು ಅಳಿಸಿಹಾಕಲು ಅವರು ಮೇಲ್ಜಾತಿಯವರಿಂದಲೇ ಪ್ರಾರಂಭವಾಗಬೇಕು ಮತ್ತು ಅವರಿಂದಲೇ ಅದು ಶಾಂತಿಯುತವಾದ ಅಂತ್ಯ ಕಾಣಲು ಸಾಧ್ಯವೆಂಬ ಅರ್ಥವಾಗುತ್ತದೆ.

### 4. ಬಲವಂತದ ದುಡಿಮೆಯಿಂದ ಮುಕ್ತಿ:

ಸಂಸ್ಥಾನದಲ್ಲಿ ಮಹರ್ ಜಾತಿಯವರು ಸರ್ಕಾರಕ್ಕೆ ಅಥವಾ ಅಧಿಕಾರಿಗಳಿಗೆ ವೇತನರಹಿತವಾಗಿ ದುಡಿಮೆ ಮಾಡುವ 'ವೇತ್‌ವರ್ಲ' ಎಂಬ ಅಮಾನವೀಯ ಪದ್ಧತಿ ಜಾರಿಯಲ್ಲಿತ್ತು. ಇದನ್ನು ಮಹರರ ಮೇಲೆ ಒತ್ತಾಯಪೂರ್ವಕವಾಗಿ ಹೇರಲಾಗಿತ್ತು. ಈ ಪದ್ಧತಿಯಡಿಯಲ್ಲಿ ಒಬ್ಬ ಮಹಾರ್‌ನು ಹಳ್ಳಿಯ ಪಾಟೀಲ-ಕುಲಕರ್ಣಿ ಅಥವಾ ಇತರೆ ಅಧಿಕಾರಿಗಳಿಗೆ ಸಣ್ಣಪುಟ್ಟ ಸೇವೆಗಳನ್ನು ಮಾಡಬೇಕಾಗಿತ್ತು. ಇದಕ್ಕಾಗಿ ಅವನಿಗೆ ಊರಿನಲ್ಲಿ ವತನ ಭೂಮಿಯ ಹಕ್ಕುಗಳನ್ನು ಹೊಂದಿದ್ದನು. ಆದರೆ ಪಾಟೀಲ-ಕುಲಕರ್ಣಿಯರಂತೆ ಪ್ರತಿಷ್ಠೆಯಿಂದ ಕೂಡಿರಲಿಲ್ಲ, ಬದಲಾಗಿ ವಂಶಪಾರಂಪರ್ಯವಾಗಿ ಬಲವಂತದ ದುಡಿಮೆ ಮಾಡುವುದು ಕಡ್ಡಾಯವಾಗಿತ್ತು. ಮಹರ್‌ನ ವತನವು ಸಾಮಾಜಿಕ ಗುಲಾಮಿತನವಾಗಿ ಪರಿವರ್ತನೆಯಾಗಿತ್ತು, ಅವರು ಇದರಿಂದ ಮುಕ್ತಿ ಹೊಂದಲು ಪರದಾಡುತ್ತಿದ್ದರು. ಈ ಬಲವಂತದ ದುಡಿಮೆಯಿಂದ ಮಹರರನ್ನು

ಮುಕ್ತಿಗೊಳಿಸುವ ಸಲುವಾಗಿ ಚರ್ಚಿಸಿ ಕೊನೆಗೆ 26-06-1918 ರಂದು ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿ 'ಮಹರರ ವತನ ಭೂಮಿಯನ್ನು ರೈತವಾರಿ ಭೂಮಿಯಾಗುತ್ತದೆ', ಮಹರರು ಅರ್ಜಿ ಸಲ್ಲಿಸಲು ತಿಳಿಸಿದರು. ವತನ ಭೂಮಿಯು ರೈತವಾರಿ ಭೂಮಿಯಾಗುವುದರಿಂದ ಭೂಮಿಯ ಹಕ್ಕು ಹೋಗುವುದಿಲ್ಲ ಮತ್ತು ಬಲವಂತದ ವೇತವರ್ಲದಿಂದ ಮುಕ್ತರಾಗಬಹುದೆಂದು ತಿಳಿಸಿದರು. ಇದನ್ನೇ ಮುಂದೆ ಕಾನೂನಾಗಿ ಪರಿವರ್ತಿಸಿದರು. ಇದರಿಂದ ಪಾರಂಪರಿಕವಾಗಿ ಮುಂದುವರೆದುಕೊಂಡು ಬಂದಿದ್ದ ವೇತವರ್ಲ ಎಂಬ ಅಮಾನವೀಯ ಪದ್ಧತಿಯನ್ನು ಕೊನೆಗೊಳಿಸಿದರು.

## 5. ಅಲ್ಪಸಂಖ್ಯಾತರ ಕಲ್ಯಾಣದ ಕಾಳಜಿ

ಶಾಹು ಮಹಾರಾಜರು ತಮ್ಮ ಸಂಸ್ಥಾನದಲ್ಲಿ ಮರಾಠ, ಜೈನ ಮತ್ತು ಲಿಂಗಾಯತರಂತೆ ಶಿಕ್ಷಣದಲ್ಲಿ ಹಿಂದುಳಿದ ಮುಸ್ಲಿಂ ಸಮುದಾಯದ ಕಲ್ಯಾಣಕ್ಕಾಗಿ ವಿಶೇಷ ಕಾಳಜಿ ವಹಿಸಿದರು. 1902 ರಲ್ಲಿ ಶಾಹುರವರು ಇಂಗ್ಲೆಂಡಿನಿಂದ ಬಂದಾಗ ಅವರಿಗೆ ಸತ್ಕಾರ ಮಾಡಲು ಒಂದು ಸಮಾರಂಭವನ್ನು ವ್ಯವಸ್ಥೆಗೊಳಿಸಿದ್ದರು. ಇದರ ಲಾಭ ಪಡೆದ ಮಹಾರಾಜರು ಮುಸ್ಲಿಂ ನಾಯಕರಿಗೆ ತಮ್ಮ ಸಮುದಾಯದಲ್ಲಿ ಶಿಕ್ಷಣದ ಬಗ್ಗೆ ಜಾಗೃತಿ ಮೂಡಿಸಲು ಅಭಿಯಾನವನ್ನು ಪ್ರಾರಂಭಿಸಬೇಕೆಂದು ಕೇಳಿಕೊಂಡರು, ಅಲ್ಲದೇ ದರ್ಬಾರು ಸರ್ವ ರೀತಿಯ ಸಹಾಯ ಮಾಡಲು ಮುಂದಿದೆ ಎಂದು ತಿಳಿಸಿದರು. ಮುಂದೆ ಮಹಾರಾಜರು 1906 ರಲ್ಲಿ ತಾವೇ ಸ್ವತಃ ಆಸಕ್ತಿವಹಿಸಿ ಮುಸ್ಲಿಂ ಸಮುದಾಯದ ಗೌರವಾನ್ವಿತ ವ್ಯಕ್ತಿಗಳ ಒಂದು ಸಭೆಯನ್ನು ಕರೆದರು ಮತ್ತು ಮಹಮ್ಮದೀಯರ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದರು. ಅಲ್ಲದೇ ತಾವೇ ಅದರ ಅಧ್ಯಕ್ಷರಾದರು ಮತ್ತು ಯೂಸೂಫ್ ಅಬ್ದುಲ್ಲಾರನ್ನು ಅದರ ಕಾರ್ಯದರ್ಶಿಯನ್ನಾಗಿ ಮಾಡಿದರು. ಕೊಲ್ಹಾಪುರ ನಗರದ ಪವಿತ್ರ ಸ್ಥಳಗಳಿಂದ ವಿವಿಧ ಧಾರ್ಮಿಕ ಸಮಾರಂಭಗಳಿಗಾಗಿ ಸಂಗ್ರಹಿಸಿದ ಹಣವನ್ನು ದುಂದು ಖರ್ಚು ಮಾಡದೆ ಅದರಲ್ಲಿ ಒಂದಿಷ್ಟು ಹಣವನ್ನು ಮುಸ್ಲಿಂ ವಿದ್ಯಾರ್ಥಿ ನಿಲಯಗಳಿಗೆ ಮತ್ತು ಮಹಮ್ಮದೀಯರ ಶಿಕ್ಷಣ ಸಂಸ್ಥೆಗೆ ವರ್ಗಾಯಿಸುವ ವ್ಯವಸ್ಥೆ ಮಾಡಿದರು.

## 6. ಕಾರ್ಮಿಕರ ಕಲ್ಯಾಣಕ್ಕಾಗಿ ಮಿಡಿತ

ಶಾಹು ಮಹಾರಾಜರಿಗೆ ತಮ್ಮ ಸಂಸ್ಥಾನದಲ್ಲಿರುವ ಕಾರ್ಮಿಕರ ಸಮಸ್ಯೆಗಳನ್ನು ಅರಿತಿದ್ದರು. ಶಾಹುರವರು ಕಾರ್ಮಿಕರ ಸಭೆಗಳನ್ನು ಉದ್ದೇಶಿಸಿ ಮಾಡಿದ ಎರಡು ಭಾಷಣಗಳಿಂದ ಅವರ ಚಿಂತನೆಗಳು ಹೇಗೆ ಜನಸಾಮಾನ್ಯರ ಪರವಾಗಿದ್ದವು ಎಂಬುದು ತಿಳಿಯುತ್ತದೆ. 1918 ರ ನವೆಂಬರ್ 10 ರಂದು ಬಾಂಬೆಯ ಉಪನಗರ ಪರೇಲ್‌ನಲ್ಲಿ 10000 ಕಾರ್ಮಿಕರ ಒಂದು ಸಭೆಯನ್ನು ವ್ಯವಸ್ಥೆಗೊಳಿಸಲಾಗಿತ್ತು. ಇದರ ಅಧ್ಯಕ್ಷತೆ ವಹಿಸಿದ್ದ ಶಾಹು ಮಹಾರಾಜರು ಅವರ ಭಾಷಣದ ಆರಂಭದಲ್ಲಿ ಅವರು, "ನಾನು ನಿಮ್ಮ ಭಾಗಕ್ಕೆ ಸೇರಿದವನು. ಆದ್ದರಿಂದ ನಾನು ವಿಶೇಷವಾಗಿ ಈ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದೇನೆ....." ಎಂದಿರುವ ಮಾತುಗಳು ಕಾರ್ಮಿಕರ

ಪರವಾಗಿದ್ದೇನೆ ಎಂದು ತಿಳಿಸಿದ್ದರು. ಭಾರತೀಯ ಕಾರ್ಮಿಕರು ಯುರೋಪಿಯನ್ ಕಾರ್ಮಿಕರಂತೆ ಒಗ್ಗಟ್ಟಾಗಬೇಕೆಂದು ಕರೆಕೊಟ್ಟರು. ಕಾರ್ಮಿಕರ ಸಂಘಗಳನ್ನು ಸ್ಥಾಪಿಸಲು ಉತ್ತೇಜಿಸಿದರು. ತತ್ಪರಿಣಾಮವಾಗಿ ಸಿ.ಕೆ.ಬೋಲೆ ಮತ್ತು ಸಹವರ್ತಿಗಳಿಂದ 'ಜನರ ಸಂಘ' ಎಂಬ ಕಾರ್ಮಿಕರ ಸಂಘವನ್ನು ಮುಂಬೈನಲ್ಲಿ ಸ್ಥಾಪಿಸಿದರು. ಅಲ್ಲದೇ ಇವರ ಒತ್ತಾಯದಿಂದ ಅಖೀಲ ಭಾರತೀಯ ಕಾರ್ಮಿಕ ಸಂಘಟನೆಯನ್ನು 1920 ರಲ್ಲಿ ಸ್ಥಾಪಿಸಲಾಯಿತು. ಭಾರತದಲ್ಲಿ ಕಾರ್ಖಾನೆ ಕಾರ್ಮಿಕರು ಮತ್ತು ಕೃಷಿ ಕಾರ್ಮಿಕರನ್ನು ಮುಖ್ಯವಾಗಿಟ್ಟುಕೊಂಡು ಹಲವು ಕಲ್ಯಾಣ ಕಾರ್ಯಗಳನ್ನು ಕೈಗೊಂಡರು ಎಂಬುದು ವಿಶೇಷ.

**7. ಮಹಿಳಾ ಶೋಷಣೆ ವಿಮೋಚನೆ ಕ್ರಮಗಳು**

ಪುರುಷಪ್ರಾಧಾನ್ಯ ಸಂಸ್ಕೃತಿಯಲ್ಲಿ ಮಹಿಳೆಯರ ಮೇಲಿನ ಅನ್ಯಾಯ, ದಬ್ಬಾಳಿಕೆ ನಡೆಯುತ್ತಿರುವುದು ಐತಿಹಾಸಿಕ ಸತ್ಯವಾಗಿದೆ. ಕೊಲ್ಹಾಪುರ ಸಂಸ್ಥಾನದಲ್ಲಿಯೂ ಮಹಿಳೆಯರ ಮೇಲಿನ ದಬ್ಬಾಳಿಕೆಯ ಬಾಲ್ಯವಿವಾಹ, ವಿಧವಾ ಪುನರ್ ವಿವಾಹ ನಿರಾಕರಣೆ, ಶಿಕ್ಷಣದ ನಿರಾಕರಣೆ, ಆಸ್ತಿಯ ನಿರಾಕರಣೆಗಳಂತಹ ಹಲವು ಅನ್ಯಾಯದ ಕ್ರಮಗಳು ಜಾರಿಯಲ್ಲಿದ್ದವು. ಇವುಗಳನ್ನು ಗಮನಿಸಿದ ಮಹಾರಾಜರು ಮಹಿಳೆಯರ ಪ್ರಕೃತಿದತ್ತ ಹಕ್ಕುಗಳ ರಕ್ಷಣೆಗೆ, ಅವರ ವಿಮೋಚನೆಗಾಗಿ ಹಲವು ಕ್ರಮಗಳನ್ನು ಜಾರಿಗೊಳಿಸಿದರು.

- ವಿವಾಹ ಪುನರ್ ವಿವಾಹ ಕಾಯ್ದೆ–1917
- ಅಂತರ್‌ಜಾತಿ ವಿವಾಹ ಕಾಯ್ದೆ–1919
- ಮಹಿಳೆಯರ ಮೇಲಿನ ಕ್ರೌರ್ಯ ತಡೆಗಟ್ಟುವ ಕಾಯ್ದೆ–1919
- ದೇವದಾಸಿ ಪದ್ಧತಿಯ ತಡೆ ಕಾಯ್ದೆ

ಈ ರೀತಿಯಲ್ಲಿ ಹಲವು ಕಾಯ್ದೆ–ಕಾನೂನು, ನಿಯಮಗಳನ್ನು ಜಾರಿಗೊಳಿಸುವ ಮೂಲಕ ಮಹಿಳೆಯ ಸಾಮಾಜಿಕ ಸ್ವಾತಂತ್ರ್ಯ ರಕ್ಷಣೆಗಾಗಿ ಶಾಹು ಮಹಾರಾಜರು ತಮ್ಮ ಆಡಳಿತವನ್ನು ಪ್ರಗತಿಪರವನ್ನಾಗಿಸಿದರು.

**ಉಪಸಂಹಾರ**

ಹೀಗೆ ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಧಾರ್ಮಿಕ ಸುಧಾರಣೆಗಳನ್ನು ಪರಿಚಯಿಸಿ ಜಾರಿಗೊಳಿಸುವ ವಿಚಾರದಲ್ಲಿ ಶಾಹು ಮಹಾರಾಜರು ತಮ್ಮ ಜನರಿಗೆ ಸಾಮಾಜಿಕ–ಆರ್ಥಿಕ ಹಕ್ಕುಗಳನ್ನು ನೀಡಿದ್ದು ಮಾನವನ ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರ ಭಾವನೆಯ ಮೂಲತತ್ತ್ವಗಳಲ್ಲಿ ಅವರಿಗಿರುವ ಅಗಾಧ ನಿಷ್ಠೆಯನ್ನು ಎತ್ತಿತೋರಿಸುತ್ತದೆ. ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಕೇವಲ ತಾತ್ತ್ವಿಕವಾಗಿ ಚರ್ಚಿಸದೆ ಅದನ್ನು ತಮ್ಮ ಸಂಸ್ಥಾನದಲ್ಲಿ ದೃಢಸಂಕಲ್ಪದಿಂದ ಜಾರಿಗೊಳಿಸಿದ್ದು ಅವರು ಶೋಷಿತ, ಹಿಂದುಳಿದ ವರ್ಗಗಳ ಕುರಿತಾದ ಅವರ ಕಳಕಳಿ ಎಷ್ಟಿತ್ತೆಂದು ಗೊತ್ತಾಗುತ್ತದೆ. ಮುಂದೆ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರು ಭಾರತದ

ಸಂವಿಧಾನದಲ್ಲಿ ಮೀಸಲಾತಿ ಪದ್ಧತಿಯನ್ನು ಸೇರಿಸಿರುವ ಮೂಲ ಬೇರುಗಳು ಈ ಸಂಸ್ಥಾನದಲ್ಲಿ ಮಾಡಿದ ಘೋಷಣೆಗಳಲ್ಲಿವೆ ಎಂಬುದು ವಿಶೇಷ. ಒಟ್ಟಾರೆಯಾಗಿ ಇವರು ವಸಾಹತು ಕಾಲಘಟ್ಟದ ಬ್ರಿಟಿಷ್ ಆಡಳಿತದಲ್ಲಿ ಪ್ರಗತಿಪರರಾಗಿ, ಜನಾನುರಾಗಿಗಳಾಗಿ ನಡೆದಂತೆ ನುಡಿದು, ನುಡಿದಂತೆ ನಡೆದು ನಿರಂತರವಾಗಿ ಅಜರಾಮರರಾದ ಮಹಾನುಭಾವರಾಗಿದ್ದಾರೆ.

**ಪರಾಮರ್ಶನ ಗ್ರಂಥಗಳು:**


1. ಚಂದ್ರಶೇಖರ ಎಸ್. ಮತ್ತು ಸುರೇಂದ್ರರಾವ್ ಬಿ. (ಸಂ), (2016), ಕರ್ನಾಟಕದ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲವು ನೆಲೆಗಳು (ಸಂಪುಟ 10), ಬೆಂಗಳೂರು: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ.
2. ವಿಜಯ ಪೂಣಚ್ಚ ತಂಬಂಡ ಮತ್ತು ಚಿನ್ನಸ್ವಾಮಿ ಸೋಸಲೆ ಎನ್. (ಸಂ), (2010), ಸಮಕಾಲೀನ ಕರ್ನಾಟಕ ಚರಿತ್ರೆಯ ವಿವಿಧ ಆಯಾಮಗಳು, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
3. ಚಂದ್ರಶೇಖರ ಟಿ.ಆರ್., (2023), ಭಾರತದಲ್ಲಿ ಮೀಸಲಾತಿ ಇತಿಹಾಸ ಮತ್ತು ಮಿಲ್ಲರ್ ಸಮಿತಿ ವರದಿ: ಒಂದು ಅಧ್ಯಯನ, ಬೆಂಗಳೂರು: ನವಕರ್ನಾಟಕ ಪ್ರಕಾಶನ.
4. ಅನುಪಮಾ ಎಚ್.ಎಸ್., (2018), ವಿಮೋಚಕನ ಹೆಜ್ಜೆಗಳು, ಗದಗ: ಲಡಾಯಿ ಪ್ರಕಾಶನ.
5. ಜಯಸಿಂಗ್ ಪವಾರ (ಮೂಲ) ಮತ್ತು ಪ್ರೊ. ಹನುಮಂತು (ಅನುವಾದ), (2018), ಸಾಮಾಜಿಕ ಕ್ರಾಂತಿಕಾರಿ ರಾಜ ರಾಜರ್ಷಿ ಶಾಹು ಛತ್ರಪತಿ (ಸಂಪುಟ 1 ಮತ್ತು 2), ಬೆಂಗಳೂರು: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ.
6. ಧನಂಜಯ ಕೀರ್ (ಮೂಲ) ಮತ್ತು ಡಾ. ಜೆ.ಪಿ. ದೊಡಮನಿ (ಅನುವಾದ), (2018), ರಾಜರ್ಷಿ ಶಾಹೂ ಛತ್ರಪತಿ, ತೇರದಾಳ: ಸುಶೀಲ್ ಪ್ರಕಾಶನ.
7. ಅನುಪಮಾ ಎಚ್.ಎಸ್., (2020), ಛತ್ರಪತಿ ಶಾಹೂ, ಗದಗ: ಲಡಾಯಿ ಪ್ರಕಾಶನ.
8. ಶ್ಯೋರಾಜ್ ಸಿಂಗ್ ಬೆಚೈನ್ (ಮೂಲ), ರೇಣುಕಾ ನಿಡಗುಂದಿ ಮತ್ತು ರಮೇಶ ಅರೋಲಿ (ಅನುವಾದ), (2025), ಮಾತಿಲ್ಲದವರ ಮರುದನಿಯಾಗಿ ಮೂಕನಾಯಕ (ಮೂಕನಾಯಕ ಪತ್ರಿಕೆಯ ಸಂಪಾದಕೀಯಗಳು), ಶಿವಮೊಗ್ಗ: ಅಹರ್ನಿಶಿ ಪ್ರಕಾಶನ.
9. ಪವಾರ ಗೋ.ಮಾ. (ಮೂಲ) ಮತ್ತು ಚಂದ್ರಶೇಖರ ಪೋಕಳೆ (ಅನುವಾದ), (2015), ಮಹರ್ಷಿ ವಿಠ್ಠಲ ರಾಮಜಿ ಶಿಂಧೆ: ಜೀವನ ಮತ್ತು ಕಾರ್ಯ, ನವದೆಹಲಿ: ಸಾಹಿತ್ಯ ಅಕಾಡೆಮಿ.
10. ಬಾಬಾಸಾಹೇಬ್ ಅಂಬೇಡ್ಕರ್, (2015), ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು, ಬೆಂಗಳೂರು: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ.
11. ಪೋತೆ ಎಚ್.ಟಿ., (2013), ಸ್ವಾತಂತ್ರ್ಯ ಪೂರ್ವದ ದಲಿತ ಚಳುವಳಿ, ಧಾರವಾಡ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.